**ಕರ್ನಾಟಕ ಸರ್ಕಾರ**

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ – 571 313
ದೂರವಾಣಿ : ಕಚೇರಿ: 08226-226229
ಈ ಮೈಲ್ : chncirccf@gmail.com

**ಅರಣ್ಯ ಇಲಾಖೆ**

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ (ಪ್ರಾದೇಶಿಕ), ಚಾಮರಾಜನಗರ**

ಸಂಖ್ಯೆ: ಸಿ1/ಲ್ಯಾಂಡ್/ರಸ್ತೆ ನಿರ್ಮಾಣ/ಹೆಗ್ಗನೂರು ಉಪ ಕೇಂದ್ರ/ಜಿಎಲ್- /2018-19 ದಿನಾಂಕ: 24-01-2019.

ಇವರಿಗೆ,

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
(ಅರಣ್ಯ ಸಂರಕ್ಷಣೆ), ಅರಣ್ಯ ಭವನ,
ಮಲ್ಲೇಶ್ವರಂ, **ಬೆಂಗಳೂರು.**

ಮಾನ್ಯರೇ,

ವಿಷಯ : Diversion of 2.124 (Revised from 1.494 ha.) of forest land in Sy. No.1 of Cheelandavadi Village, Kanakapura Taluk in Ramanagara Division & District for construction of 66 KV Sc line on DC towers from existing 66/11 KV Doddalahalli Sub-station to Proposed 66/11 KV Hegganuru Substation (12.238 Kms distance) in favour of the Executive Engineer (Ele.) Major works division, Karnataka power Transmission Corporation Limited (KPTCL), Old BM Road, Ramanagar **Proposal No: FP/KA/TRANS/27085/2017.**

ಉಲ್ಲೇಖ :
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಎ5(4)(6)/ಜಿಎಫ್ಎಲ್/ಸಿಆರ್-7/2017-18 ದಿನಾಂಕ: 12.02.2018.
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಪತ್ರ ಸಂಖ್ಯೆ: ಎ4/ಲ್ಯಾಂಡ್/ಎಫ್‌ಸಿ/ವಿವ-8/2017-18 ದಿನಾಂಕ: 26.12.2018.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಹೆಗ್ಗನೂರು ಬಳಿ ಸ್ಥಾಪಿಸಲಾಗುವ 66/11 ಕೆವಿ ಉಪ ವಿದ್ಯುತ್ ಕೇಂದ್ರಕ್ಕೆ ಹಾಲಿ ಇರುವ 66/11 ಕೆವಿ ದೊಡ್ಡಾಲಹಳ್ಳಿ ಉಪ ಕೇಂದ್ರದಿಂದ 12.238 ಕಿ.ಮೀ. 66 ಕೆವಿ ಎಸ್.ಸಿ ಮಾರ್ಗ ನಿರ್ಮಿಸಲು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಚಿಲಂದವಾಡಿ ಗ್ರಾಮದ ಸರ್ವೆ ನಂ.1ರ ಅರಣ್ಯ ಪ್ರದೇಶ 2.124 ಹೆ. ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆ ಮಾಡುವ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ರವರು ಕೋರಿರುವ ಮೇರೆಗೆ, ಮೇಲಾಧಿಕಾರಿಗಳ ನಿರ್ದೇಶನದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರು ಸದರಿ ಉದ್ದೇಶಕ್ಕೆ ಬಿಡುಗಡೆ ಮಾಡಲು ಕೋರಿರುವ ಸ್ಥಳವನ್ನು ಪರಿಶೀಲಿಸಿ ಉಲ್ಲೇಖ (2)ರಂತೆ ಈ ಕಛೇರಿಗೆ ವರದಿ ಮಾಡಿರುತ್ತಾರೆ ಹಾಗೂ ಉಪಯೋಗಿ ಸಂಸ್ಥೆಯವರು ಮೇಲಿನ ಅರಣ್ಯ ಭೂಮಿಗೆ ಬದಲಾಗಿ ಪರಿಹಾರಾತ್ಮಕ ನೆಡುತೋಪು ನಿರ್ಮಾಣಕ್ಕೆ ಎರಡು ಪಟ್ಟು ಭೂಮಿಯನ್ನು ಅಂದರೆ 4.248 ಹೆ. ರಾಮನಗರ ವಿಭಾಗ ವ್ಯಾಪ್ತಿಯಲ್ಲಿ ಡಿ ಗ್ರೇಡ್ ಮತ್ತು ನಾನ್ ಫಾರೆಸ್ಟ್ ಭೂಮಿಯನ್ನು ಗುರುತಿಸಿ, ಸದರಿ ಸ್ಥಳದ ನಕಾಶೆಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ ಇವರು ಸಲ್ಲಿಸಿರುವುದನ್ನು ಉಲ್ಲೇಖ (2)ರ ಪತ್ರದೊಂದಿಗೆ ಸಲ್ಲಿಸಿರುತ್ತಾರೆ ಹಾಗೂ ಈ ಸಂಬಂಧ ಅನ್‌ಲೈನ್ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳಲಾಗಿರುವುದಾಗಿ ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಉಲ್ಲೇಖ (2)ರ ಪತ್ರದೊಂದಿಗೆ ಸ್ವೀಕೃತವಾದ ಪೂರ್ಣ ದಾಖಲೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,**
**(ಪ್ರಾದೇಶಿಕ), ಚಾಮರಾಜನಗರ.**